# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

www.souharda.coop, Ph: 080-23378375-80, Email:souharda@souharda.coop


ಸಂಖ್ಯೆ: ಸಂ.ಸ/ಸಿಬ್ಬಂದಿ/ನೇ.ನೇಮಕಾತಿ/02/2017–18 ದಿನಾಂಕ:18.02.2018

## ತಿದ್ದುಪಡಿ ಅಧಿಸೂಚನೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇದರಲ್ಲಿ ಖಾಲಿ ಇರುವ ವಿವಿಧ ವೃಂದಗಳಲ್ಲಿನ 60 ಹುದ್ದೆಗಳ ನೇಮಕಾತಿಗಾಗಿ ಸಂಖ್ಯೆ:ಸಂ.ಸ/ಸಿಬ್ಬಂದಿ/ನೇ.ನೇಮಕಾತಿ/01/2017–18, ದಿನಾಂಕ:12.01.2018ರಂತೆ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಸದರಿ ಅಧಿಸೂಚನೆಗೆ ತಿದ್ದುಪಡಿ ಮಾಡಲಾಗಿದ್ದು ವಿವರ ಕೆಳಗಿನಂತಿದೆ.

1. ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ವಿಸ್ತರಿಸಲಾಗಿದ್ದು ಅರ್ಹ ಅಭ್ಯರ್ಥಿಗಳು ದಿನಾಂಕ:05.03.2018ರ ಸಂಜೆ 5:00 ಘಂಟೆಯೊಳಗೆ ಸಂಯುಕ್ತ ಸಹಕಾರಿಗೆ ತಲುಪುವಂತೆ ಅರ್ಜಿಯನ್ನು ಅಗತ್ಯ ದಾಖಲಾತಿಗಳೊಂದಿಗೆ ಸಲ್ಲಿಸುವುದು.
2. ಕ್ರಮ ಸಂಖ್ಯೆ 04, ತಾಂತ್ರಿಕ ಅಧಿಕಾರಿ ಹುದ್ದೆಯ ವಿದ್ಯಾರ್ಹತೆಯಲ್ಲಿ 'ಬಿಇ ಸಿವಿಲ್' ಅನ್ನು ಸೇರಿಸಿದೆ.
3. ಕ್ರಮ ಸಂಖ್ಯೆ 09 (ಉಪ ಸಿಬ್ಬಂದಿ–ಅಟೆಂಡರ್), ಕ್ರಮ ಸಂಖ್ಯೆ 10 (ಉಪ ಸಿಬ್ಬಂದಿ (ಅಟೆಂಡರ್) ಕಮ್ ವಾಹನ ಚಾಲಕ), ಕ್ರಮ ಸಂಖ್ಯೆ 11 (ಸ್ವಚ್ಛತಾ ಸಿಬ್ಬಂದಿ) ಹುದ್ದೆಗಳ ಶೈಕ್ಷಣಿಕ ವಿದ್ಯಾರ್ಹತೆಯ ಅಂಕಗಳ ಶೇಕಡಾವಾರು ಪ್ರಮಾಣವನ್ನು ಶೇ.10ರಷ್ಟು ಸಡಿಲಿಕೆ ಮಾಡಲಾಗಿದೆ.
4. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಲ್ಲಿ ಈಗಾಗಲೇ ಸೇವೆಯಲ್ಲಿರುವ ಸಿಬ್ಬಂದಿಗಳಿಗೆ ಶೇ.5ರಷ್ಟು ಶೈಕ್ಷಣಿಕ ವಿದ್ಯಾರ್ಹತೆಯ ಅಂಕಗಳ ಶೇಕಡಾವಾರು ಪ್ರಮಾಣವನ್ನು ಸಡಿಲಿಕೆ ಮಾಡಲಾಗಿದೆ.
5. ಗರಿಷ್ಠ ವಯೋಮಿತಿಯನ್ನು – ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಲ್ಲಿ ಈಗಾಗಲೇ ಸೇವೆಯಲ್ಲಿರುವ ಸಿಬ್ಬಂದಿಗಳಿಗೆ, ಆಯಾ ಸಿಬ್ಬಂದಿಯ ಸಂಯುಕ್ತ ಸಹಕಾರಿಯಲ್ಲಿನ ಸೇವೆಯ ಅವಧಿಯಷ್ಟು ಸಡಿಲಿಕೆ ಮಾಡಲಾಗಿದೆ.
6. ಲಿಖಿತ ಪರೀಕ್ಷೆ ಪಠ್ಯಕ್ರಮದಲ್ಲಿ ಪತ್ರಿಕೆ 01 (ಇ) ಸಹಕಾರ ಚಳುವಳಿ ವಿಷಯಕ್ಕೆ 25 ಅಂಕಗಳನ್ನು ಹಾಗೂ ಪತ್ರಿಕೆ 02 (ಆ) ಸಾಮಾನ್ಯ ಜ್ಞಾನ ಹಾಗೂ ಸಾಮಾನ್ಯ ಇಂಗ್ಲೀಷ್ ವಿಷಯಗಳಿಗೆ 35 ಅಂಕಗಳನ್ನು ನಿಗದಿಪಡಿಸಿದೆ.

ಈ ಮೇಲ್ಕಂಡ ತಿದ್ದುಪಡಿಯನ್ನು ಹೊರತುಪಡಿಸಿ ಉಳಿದೆಲ್ಲ ವಿವರಗಳು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ನಲ್ಲಿ ಪ್ರಕಟಿಸಿರುವ ಸಂಖ್ಯೆ:ಸಂ.ಸ/ಸಿಬ್ಬಂದಿ/ನೇ.ನೇಮಕಾತಿ/01/2017–18, ದಿನಾಂಕ:12.01.2018ರ ಅಧಿಸೂಚನೆಯಂತೆ ಅನ್ವಯವಾಗುತ್ತವೆ.

ಸಹಿ/–

ವ್ಯವಸ್ಥಾಪಕ ನಿರ್ದೇಶಕ

ಮತ್ತು ಸದಸ್ಯ ಕಾರ್ಯದರ್ಶಿ, ಸಿಬ್ಬಂದಿ ನೇಮಕಾತಿ ಸಮಿತಿ

ಸ್ಥಳ : ಬೆಂಗಳೂರು

ದಿನಾಂಕ: 18.02.2018